ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

:22

ಇಲಾಖೆ / ವಿಷಯ : DEPARTMENT / SUBJECT: ಸಂಸತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯ ವಾಣಿ ದಿನಾಂಕ : DATE : 21/9/2020


# ಕೃಷಿ ಮಸೂದೆಗಳಿಗೆ ಮೇಲ್ಮನೆ ಅಸ್ತು

ಉ.ವಾ 21/9/20

**ನವದೆಹಲಿ:** ಪ್ರತಿಪಕ್ಷಗಳ ತೀವ್ರ ಗದ್ದಲ-ಕೋಲಾಹಲಗಳ ನಡುವೆಯೇ ಎರಡು ಪ್ರಮುಖ ಕೃಷಿ ಸಂಬಂಧಿ ವಿಧೇಯಕಗಳು ರಾಜ್ಯಸಭೆಯಲ್ಲಿ ಕೊನೆಗೂ ಅಂಗೀಕಾರಗೊಂಡಿವೆ. ಉಪಸಭಾಧ್ಯಕ್ಷರ ಮೈಕ್ರೋಫೋನ್ ಕಿತ್ತುಕೊಳ್ಳುವ, ರೂಲ್ ಬುಕ್ ಕಸಿಯುವ ಯತ್ನ, ಕಾಗದಪತ್ರಗಳ ಹರಿಯುವಿಕೆ ಸೇರಿದಂತೆ ಮತ ವಿಭಜನೆಗೆ ಆಗ್ರಹಿಸಿ ಪ್ರತಿಪಕ್ಷಗಳ ಸದಸ್ಯರು ನಡೆಸಿದ ಎಲ್ಲ ಪ್ರಯತ್ನಗಳೂ ವಿಫ‌ಲಗೊಂಡಿವೆ. ಈ ವಿಧೇಯಕಗಳು ಅಂಗೀಕೃತವಾಗಿರುವುದು ಐತಿಹಾಸಿಕ ಬೆಳವಣಿಗೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ. ಈ ಸಂಬಂಧ ಸರಣಿ ಟ್ವೀಟ್‌ಗಳನ್ನು ಮಾಡಿರುವ ಪ್ರಧಾನಿ, ದಶಕಗಳಿಂದ ನಮ್ಮ ದೇಶದ ರೈತರು ಕಷ್ಟಗಳನ್ನು ಅನುಭವಿಸುತ್ತಾ ಬಂದಿದ್ದಾರೆ. ಈ ಕಷ್ಟಗಳಿಗೆ ಈಗ ಪರಿಹಾರ ಸಿಕ್ಕಿದೆ ಎಂದು ಹೇಳಿದ್ದಾರೆ